ಪಾಲನೆ– ಪೋಷಣೆ

# ಮನಸ್ಸನ್ನು ಹಿಂಡುವ ‘ರಿಬ್ಬನ್’



**ವೃತ್ತಿ, ಗಳಿಕೆ, ಸಾಮಾಜಿಕ ಸ್ಥಾನಮಾನಕ್ಕಾಗಿ ಓಟ ಎಲ್ಲರ ಜೀವನದಲ್ಲಿ ಇದ್ದೇ ಇರುತ್ತದೆ. ಆ ಓಟದಲ್ಲಿ ಪೋಷಕರು ಮಕ್ಕಳನ್ನು ಮರೆಯಬಾರದು.**

■ ಸ್ವಯಂಪ್ರಭಾ

ಸಹನಾ ಮತ್ತು ಕರಣ್, ನಗರದಲ್ಲಿ ವೃತ್ತಿ ಜೀವನದ ಸವಾಲುಗಳನ್ನು ಎದುರಿಸುತ್ತಾ ಮುಂದೆ ಸಾಗುತ್ತಿರುವ ಜೋಡಿ. ಸಹನಾ ಅನಿರೀಕ್ಷಿತವಾಗಿ ಗರ್ಭಿಣಿಯಾಗುತ್ತಾಳೆ. ವೃತ್ತಿಜೀವನದ ಏಣಿಯನ್ನು ಏರಬೇಕು ಎಂದು ಆಶಿಸುವ ಮಹಿಳೆಯರಿಗೆ ವೃತ್ತಿ ಕ್ಷೇತ್ರದಲ್ಲಿ ಎಲ್ಲ ಬಾಗಿಲುಗಳೂ ಮುಕ್ತವಾಗಿ ತೆರೆದಿರುವುದಿಲ್ಲ. ಈ ವಿಷಯದಲ್ಲಿ ಪುರುಷರಿಗೆ ಎದುರಾಗದ ಹೆಚ್ಚುವರಿ ಸವಾಲುಗಳನ್ನು ಮಹಿಳೆಯರು ಎದುರಿಸಬೇಕಾಗುತ್ತದೆ. ತಾನು ಗರ್ಭಿಣಿ ಎಂಬುದು ಅನಿರೀಕ್ಷಿತವಾಗಿ ಗೊತ್ತಾದಾಗ, ಸಾಂಪ್ರದಾಯಿಕ ಕುಟುಂಬಗಳಲ್ಲಿ ಕಾಣುವ ಹರ್ಷ ಸಹನಾಳ ಮುಖದಲ್ಲಿ ಕಾಣುವುದಿಲ್ಲ. 2017ರಲ್ಲಿ ರಾಖಿ ಶಾಂಡಿಲ್ಯ ನಿರ್ದೇಶಿಸಿದ ‘ರಿಬ್ಬನ್’ ಎಂಬ ಸಿನಿಮಾದ ಕತೆಯಿದು. ಸುಮೀತ್ ವ್ಯಾಸ್ (ಕರಣ್) ಮತ್ತು ಕಲ್ಕಿ ಕೋಶ್ಲಿನ್ (ಸಹನಾ) ಮುಖ್ಯಪಾತ್ರದಲ್ಲಿದ್ದಾರೆ.

ಮುದ್ದಾದ ಹೆಣ್ಣುಮಗು ಹುಟ್ಟಿದಾಗ ಸಹನಾ ಮತ್ತು ಕರಣ್ ಅವರ ಮುಂದಿದ್ದ ಸವಾಲುಗಳ ಸ್ವರೂಪಗಳು ಬದಲಾಗುತ್ತವೆ. ಮಗು ಆರೈಕೆ, ಶಾಲೆಗೆ ಕಳುಹಿಸುವುದು, ಕರೆ ತರುವುದು, ಕೇರ್ ಸೆಂಟರ್‌ನಲ್ಲಿ ಬಿಡುವುದು, ಆಟೋವಾಲಾನನ್ನು ಗೊತ್ತುಪಡಿಸುವುದು... ಹೀಗೆ. ಚಿತ್ರದಲ್ಲಿ ಬರುವ ದೃಶ್ಯವೊಂದು ಮನಸ್ಸನ್ನು ಕಲಕಿಬಿಡುತ್ತದೆ. ಪುಟ್ಟಿಯನ್ನು ದಿನವೂ ಫ್ಲಾಟ್‌ನ ಬಾಗಿಲಿನವರೆಗೂ ತಂದುಬಿಡುವ ಡ್ರೈವರ್ ಆ ದಿನ ರಜಾ ಮಾಡಿದ್ದಾನೆ. ಮಗಳನ್ನು ಕರೆದುಕೊಂಡು ಬರಲು ಅಪ್ಪನೇ ಹೋಗುತ್ತಾನೆ. ಇನ್ನೂ ಅಪ್ಪನ ಮೊಣಕಾಲಿನೆತ್ತರಕ್ಕೆ ಬೆಳೆಯದ ಪುಟ್ಟ ಹುಡುಗಿ; ಲಿಫ್ಟ್ ಒಳಗೆ ಪ್ರವೇಶಿಸಿ, ಬಟನ್ ಒತ್ತಿ, ಅಪ್ಪ ಮಗಳು ಇಬ್ಬರೂ ಒಂದೊಂದು ಬದಿಗೆ ನಿಲ್ಲುತ್ತಾರೆ. ಲಿಫ್ಟ್‌ನ ಬಾಗಿಲು ಮುಚ್ಚಿದ ಕೂಡಲೇ, ಪುಟ್ಟಿ ತನ್ನ ಯೂನಿಫಾರಂ ಅನ್ನು ಮೇಲೆತ್ತಿ, ‘ಅಪ್ಪ, ಚಾಕೊಲೇಟ್...’ ಎಂದು ಕೇಳುತ್ತಾಳೆ. ಅಪ್ಪನಿಗೆ ಏನೂ ಅರ್ಥವಾಗುವುದಿಲ್ಲ. ಮಗಳು ಇದೇನು ಸ್ಕರ್ಟ್ ಎತ್ತಿ ಹಿಡಿದಿದ್ದಾಳಲ್ಲಾ ಎಂಬ ಯೋಚನೆ ಅವನ ತಲೆಯೊಳಗೆ ಹಾದುಹೋಗುತ್ತದೆ. ಮನೆಗೆ ಹೋದ ನಂತರ ಪತ್ನಿಗೆ ವಿಷಯ ತಿಳಿಸಿದಾಗ, ಸಣ್ಣದೊಂದು ಸಂಶಯ ಮನದಲ್ಲಿ ಮೂಡುತ್ತ, ಅದು ಬೆಳೆಯತೊಡಗುತ್ತದೆ.

ಪುಟ್ಟ ಮಗಳನ್ನು ಡ್ರೈವರ್ ಲಿಫ್ಟ್‌ನಲ್ಲಿ ದುರ್ಬಳಕೆ ಮಾಡಿಕೊಳ್ಳುತ್ತಿದ್ದಾನೆ ಎಂಬ ವಿಷಯ ಅರಿವಿಗೆ ಬಂದ ಕೂಡಲೇ ಅಪ್ಪ ಮತ್ತು ಅಮ್ಮ ಇಬ್ಬರಿಗೂ ಇನ್ನಿಲ್ಲದಷ್ಟು ದುಃಖವಾಗುತ್ತದೆ. ಮುಗ್ಧ ಕಣ್ಣುಗಳ ಪುಟ್ಟಿ, ಆ ಭಂಗಿಯಲ್ಲಿ ನಿಂತಿರುವ ದೃಶ್ಯ ಎದೆಯನ್ನೇ ಇರಿಯುವಂತಿದೆ. ಈ ಕುರಿತು ದೂರು ನೀಡಿ, ಅಪರಾಧಿಗೆ ಶಿಕ್ಷೆಯಾಗುವಂತೆ ಹೋರಾಡುವುದು ನಮ್ಮ ಸಮಾಜದಲ್ಲಿ ಸುಲಭವಾದ ಕೆಲಸವಲ್ಲ. ವಿಷಯವನ್ನು ಪ್ರತಿಪಾದಿಸಲು ಬೇಕಾದ ಸಾಕ್ಷ್ಯಗಳನ್ನು ಸಂಗ್ರಹಿಸಿ ಮಂಡಿಸುವುದು ಎಷ್ಟು ತ್ರಾಸದಾಯಕ ಕೆಲಸ ಎಂಬುದು ಚಿತ್ರದಲ್ಲಿ ಸ್ಪಷ್ಟವಾಗಿ ಮೂಡಿಬಂದಿದೆ.

ವೃತ್ತಿ, ಗಳಿಕೆ, ಸಾಮಾಜಿಕ ಸ್ಥಾನಮಾನಕ್ಕಾಗಿ ಓಟ ಎಲ್ಲರ ಜೀವನದಲ್ಲಿ ಇದ್ದೇ ಇರುತ್ತದೆ. ಆ ಕ್ಷೇತ್ರಗಳಲ್ಲಿರುವ ತಾರತಮ್ಯಗಳ ವಿರುದ್ಧದ ಹೋರಾಟ ಕೂಡ ಮಹಿಳೆಯರ ಪಾಲಿಗೆ ಅನಿವಾರ್ಯವೇ ಆಗಿರುತ್ತದೆ. ಇದರೊಂದಿಗೆ ಮಕ್ಕಳು ಕೆಟ್ಟ ಪರಿಸ್ಥಿತಿಯನ್ನು ಎದುರಿಸಬೇಕಾಗಿ ಬಂದಾಗ, ಎಲ್ಲ ಆರೋಪಗಳನ್ನೂ ಅಮ್ಮನ ಮೇಲೆಯೇ ಹೊರಿಸಲಾಗುತ್ತದೆ. ‘ಮಗುವನ್ನು ಬಿಟ್ಟು ಹೋಗಿ ದುಡಿಯುವ ದರ್ದು ಏನಿತ್ತು?’ ಎಂಬ ಅರ್ಥದ ಟೀಕೆಗಳು ಕೇಳಿಬರುತ್ತವೆ.

ಮಗುವನ್ನು ಕಾಳಜಿ ಮಾಡಬೇಕು ಎಂಬುದಂತೂ ನಿಜವಾದ ಮಾತು. ‘ಗುಡ್ ಟಚ್, ಬ್ಯಾಡ್ ಟಚ್’ ಎಂಬ ವಿಚಾರವನ್ನು ಅರಿಯದಷ್ಟು ಪುಟ್ಟ ಮಗು ಅದಾಗಿರುವುದರಿಂದ, ಲಿಫ್ಟ್‌ನೊಳಗೆ ಹೋಗಿ ಬಾಗಿಲು ಮುಚ್ಚಿದ ಕೂಡಲೇ ತನಗೆ ಚಾಕೊಲೇಟ್ ದೊರೆಯುತ್ತದೆ ಎಂದೇ ಆ ಕಂದ ಭಾವಿಸಿಬಿಟ್ಟಿತ್ತು. ಕರುಳು ಇರಿಯುವಷ್ಟು ಕೆಟ್ಟದಾದ ಆ ಪರಿಸ್ಥಿತಿಯ ಸೃಷ್ಟಿಗೆ ಅಮ್ಮ–ಅಪ್ಪ ಇಬ್ಬರೂ ತಕ್ಕಮಟ್ಟಿಗೆ ಹೊಣೆಗಾರರು.

ಮಗು ಹೆಣ್ಣಿರಲಿ, ಗಂಡಿರಲಿ, ಇಂತಹ ಸ್ಥಿತಿಗಳಿಗೆ ಮಕ್ಕಳು ಬಲಿಯಾಗುವುದಕ್ಕೆ ಕಾರಣ ದೊಡ್ಡವರ ವಿಕೃತ ಮನಸ್ಸುಗಳು. ಮಕ್ಕಳ ರಕ್ಷಣೆಗಾಗಿ ‘ಪೋಕ್ಸೋ’ದಂತಹ ಕಾನೂನುಗಳು ಇದ್ದರೂ, ಅವುಗಳ ಬಳಕೆಯು ಸುಲಭವಲ್ಲ. ಸಾಕ್ಷಿ ನುಡಿಯುವುದನ್ನೂ ಅರಿಯದ ಪುಟ್ಟ ಮಕ್ಕಳ ಬಳಿ ಸಾಕ್ಷಿ ಹೇಳಿಸುವುದು ಕಷ್ಟವೂ ಹೌದು. ಸಾಕ್ಷಿಯ ನೆಪದಲ್ಲಿ ಮತ್ತೆ ಮತ್ತೆ ಕೆಟ್ಟ ವಿಚಾರವನ್ನು ಕೆದಕುವುದು ಅವರ ಮನಸ್ಸಿನ ಮೇಲೆ ಮತ್ತಷ್ಟು ಆಘಾತ ತರುವ ಸಾಧ್ಯತೆಯೂ ಇದೆ. ಮಕ್ಕಳ ರಕ್ಷಣೆಗಾಗಿ ಕಾನೂನುಗಳನ್ನು ರೂಪಿಸಿ ಪ್ರಚುರಪಡಿಸಿದಂತೆಯೇ, ಇಂತಹ ವಿಕೃತ ಮನಸ್ಸುಗಳು ಏಕೆ ಸೃಷ್ಟಿಯಾಗುತ್ತವೆ ಎಂಬ ಅಧ್ಯಯನವೂ ನಡೆಯಬೇಕು. ಆ ಫಲಿತಾಂಶವನ್ನು ಆಧರಿಸಿದಂತೆ, ಮಕ್ಕಳನ್ನು ಹೇಗೆ ನಡೆಸಿಕೊಳ್ಳಬೇಕು ಎಂಬ ಜಾಗೃತಿ ಕಾರ್ಯಕ್ರಮಗಳೂ ನಡೆಯಬೇಕು.

ಮಕ್ಕಳ ಬರ್ತ್ ಡೇಗಳನ್ನು ವೈಭವದಿಂದ ಆಚರಿಸುವುದರಲ್ಲಿ, ದುಬಾರಿ ಆಟದ ಸಾಮಾನುಗಳನ್ನು ಕೊಡಿಸುವುದರಲ್ಲಿ ತಮ್ಮ ಪ್ರತಿಷ್ಠೆಗಳನ್ನು ಮೆರೆಯಲು ದೊಡ್ಡವರು ಆಸಕ್ತಿ ತೋರಿಸುತ್ತಾರೆ. ಅದೇಕೋ, ಮಕ್ಕಳ ಪರವಾದ ಕಾನೂನಿಗಾಗಿ ಆಗ್ರಹ ಮಾಡುವಲ್ಲಿ, ಸದಾ ಮಕ್ಕಳ ಪರವಾಗಿಯೇ ನಾವು ನಿಲ್ಲಬೇಕಾಗಿದೆ ಎಂಬ ಮಾನವೀಯತೆಯತೆಯನ್ನು ರೂಢಿಸಿಕೊಳ್ಳುವಲ್ಲಿ ಹೆಚ್ಚು ಆಸಕ್ತಿಯನ್ನು ತೋರಿಸುವುದಿಲ್ಲ.

ಪ್ರತಿಕ್ರಿಯಿಸಿ: feedback@sudha.co.in